ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

8

ಇಲಾಖೆ / ವಿಷಯ : DEPARTMENT / SUBJECT: ಕೋವಿಡ್-19

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ                ದಿನಾಂಕ : DATE 9/7/2020

# ಕೊರೋನಾ ಗಂಡಾಂತರ ಕೇಸ್ ಡಬಲ್: ರಾಜ್ಯವೇ ನಂ.1

## ದೇಶದಲ್ಲಿ 20 ದಿನ, ರಾಜ್ಯದಲ್ಲಿ 9 ದಿನಕ್ಕೆ ದುಪ್ಪಟ್ಟು ಬೆಂಗಳೂರಲ್ಲಿ ಬರೀ 6 ದಿನಕ್ಕೆ ಸೋಂಕು ದ್ವಿಗುಣ

• **ಶ್ರೀಕಾಂತ್.ಎನ್.ಗೌಡಸಂದ್ರ,**
**ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜ್ಯದಲ್ಲಿ ಸೋಂಕಿನ ಪ್ರಮಾಣ ದೇಶದಲ್ಲೇ ಅತಿ ತೀವ್ರಗತಿಯಲ್ಲಿ ಹೆಚ್ಚಾಗುತ್ತಿದ್ದು, ಕೇವಲ 9 ದಿನಗಳಲ್ಲೇ ಸೋಂಕು ದ್ವಿಗುಣಗೊಳ್ಳುತ್ತಿದೆ. ಇದೇ ಸೋಂಕು ದ್ವಿಗುಣ ದರ ಮುಂದುವರೆದರೆ ಜುಲೈ ಅಂತ್ಯದ ವೇಳೆಗೆ ರಾಜ್ಯದಲ್ಲಿ ಕೊರೋನಾ ಸೋಂಕು 1 ಲಕ್ಷ ಪ್ರಕರಣಗಳ ಗಡಿ ದಾಟಲಿದೆ. ಈ ಪೈಕಿ ಬೆಂಗಳೂರಲ್ಲೇ 50 ಸಾವಿರ ಜನರಿಗೆ ಸೋಂಕು ತಗಲುವ ಸಾಧ್ಯತೆ ಇದೆ.

ಹೌದು.. ಅಧಿಕಾರಿಗಳು ಹಾಗೂ ತಜ್ಞರೇ ಈ ಹೇಳಿಕೆ ನೀಡಿದ್ದಾರೆ.

➘ 7

**1 ಲಕ್ಷ ಕೇಸ್**
ಮಾಸಾಂತ್ಯಕ್ಕೆ ರಾಜ್ಯದಲ್ಲಿ ಅಂದಾಜು ಸೋಂಕಿತರ ಸಂಖ್ಯೆ

**50000 ಕೇಸ್**
ಮಾಸಾಂತ್ಯಕ್ಕೆ ಬೆಂಗಳೂರಲ್ಲಿ ಅಂದಾಜು ಸೋಂಕಿತರ ಸಂಖ್ಯೆ

# ಶಾಸಕ ಶರತ್ ಬಚ್ಚೇಗೌಡ ದಂಪತಿಗೆ ಸೋಂಕು

**ಸೂಲಿಬೆಲೆ:** ಹೊಸಕೋಟೆ ಕ್ಷೇತ್ರದ ಪಕ್ಷೇತರ ಶಾಸಕ ಶರತ್ ಬಚ್ಚೇಗೌಡ ಹಾಗೂ ಇವರ ಪತ್ನಿ ಪ್ರತಿಭಾ ಶರತ್ ಬಚ್ಚೇಗೌಡಗೆ ಕೊರೋನಾ ಸೋಂಕು ದೃಢಪಟ್ಟಿದೆ.



ಇದನ್ನು ಸ್ವತಃ ಶಾಸಕ ಶರತ್ ಬಚ್ಚೇಗೌಡ ಅವರೇ ವಿಡಿಯೋ ಮೂಲಕ ತಿಳಿಸಿದ್ದಾರೆ. ವಿಡಿಯೋದಲ್ಲಿ ಹಂಚಿಕೊಂಡಿರುವ ಮಾಹಿತಿಯಂತೆ, ಜುಲೈ 6 ರಂದು ನನಗೆ ಸ್ವಲ್ಪ ಮೈಕೈ ನೋವು ಕಾಣಿಸಿಕೊಂಡಿತ್ತು. ನಿರಂತರವಾಗಿ ಕ್ಷೇತ್ರದ ಕಾರ್ಯಗಳಲ್ಲಿ ತೊಡಗಿಕೊಂಡಿದ್ದರಿಂದ ಮತ್ತು ಕೊರೋನಾ ಪೀಡಿತ ಪ್ರದೇಶಗಳಿಗೂ ಭೇಟಿ ಕೊಟ್ಟಿದ್ದರಿಂದ ಕೋವಿಡ್-19 ಪರೀಕ್ಷೆಗೆ ನಾನು ಮತ್ತು ಪತ್ನಿ ಪ್ರತಿಭಾ ಒಳಗಾಗಿದ್ದೇವು. ಬುಧವಾರ ಸಂಜೆ ಇಬ್ಬರಿಗೂ ಪಾಸಿಟಿವ್ ಎಂದು ಫಲಿತಾಂಶ ಬಂದಿದೆ. ವೈದ್ಯರ ಸಲಹೆ ಪಡೆದುಕೊಂಡು ಅಗತ್ಯ ಚಿಕಿತ್ಸೆಯೊಂದಿಗೆ ಮನೆಯಲ್ಲೇ ಕ್ವಾರಂಟೈನ್‌ಗೆ ಒಳಪಟ್ಟಿದ್ದೀವಿ ಎಂದರು.

**ಗೌಡರ ಕುಟುಂಬಕ್ಕೆ ಟೆಸ್ಟ್?:** ಶಾಸಕ ಶರತ್ ಬಚ್ಚೇಗೌಡ ಅವರು ಕಳೆದ ವಾರ ಜೆಡಿಎಸ್ ವರಿಷ್ಠ ದೇವೇಗೌಡ ಅವರನ್ನು ಭೇಟಿ ಮಾಡಿದ್ದರು. ಹೀಗಾಗಿ ಟೆಸ್ಟ್

ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕೋವಿಡ್-19

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ

ದಿನಾಂಕ : DATE 9/7/2020

## ಸಣ್ ಸುದ್ದಿ

# ಕೇಸ್ ಡಬಲ್: ರಾಜ್ಯ ನಂ.1

« ಮೊದಲ ಪುಟದಿಂದ

ಸೋಂಕು ದ್ವಿಗುಣ ಪ್ರಮಾಣ ರಾಷ್ಟ್ರೀಯ ಸರಾಸರಿ 20 ದಿನಗಳಿದ್ದರೆ, ರಾಜ್ಯದಲ್ಲಿ 9 ದಿನಕ್ಕೆ ದ್ವಿಗುಣಗೊಳ್ಳುತ್ತಿದೆ. ಅಲ್ಲದೆ, ಪ್ರತಿ 6 ದಿನಕ್ಕೊಮ್ಮೆ ದ್ವಿಗುಣಗೊಳ್ಳುವ ಮೂಲಕ ಬೆಂಗಳೂರಿನಲ್ಲಿ ಇನ್ನೂ ತೀವ್ರಗತಿಯಲ್ಲಿ ಸೋಂಕು ವೃದ್ಧಿಸುತ್ತಿದೆ. ಬೆಂಗಳೂರು ಒಂದರಲ್ಲೇ ಜುಲೈ ಅಂತ್ಯಕ್ಕೆ 50 ಸಾವಿರ ಪ್ರಕರಣಗಳು ವರದಿಯಾಗಲಿವೆ ಎಂದು ತಜ್ಞರು ಅಭಿಪ್ರಾಯಪಡುತ್ತಾರೆ. ಜು.5 ರಂದು ಭಾನುವಾರ ರಾಜ್ಯ ಕೊರೋನಾ ನಿಯಂತ್ರಣ ಕಾರ್ಯಪಡೆ ನಡೆಸಿರುವ ವಿಶ್ಲೇಷಣೆಯಲ್ಲಿ ರಾಜ್ಯದಲ್ಲಿ ದೇಶದಲ್ಲೇ ಅತಿ ಹೆಚ್ಚು ವೇಗವಾಗಿ ಸೋಂಕು ದ್ವಿಗುಣಗೊಳ್ಳುತ್ತಿದೆ. ದೆಹಲಿ (18 ದಿನ), ಮಹಾರಾಷ್ಟ್ರ (23 ದಿನ) ರಾಜ್ಯಗಳಿಗೆ ಹೋಲಿಸಿಕೊಂಡರೆ ರಾಜ್ಯದಲ್ಲಿ ಈ ಪ್ರಮಾಣ ಹೆಚ್ಚಾಗಿದೆ. ರಾಜ್ಯ ಕಾರ್ಯಪಡೆ ಬಿಡುಗಡೆಗೊಳಿಸಿರುವ 30 ರಾಜ್ಯ, ಕೇಂದ್ರಾಡಳಿತ ಪ್ರದೇಶಗಳ ಪಟ್ಟಿಯಲ್ಲಿ ಸೋಂಕು ಹೆಚ್ಚಾಗುತ್ತಿರುವುದರಲ್ಲಿ ರಾಜ್ಯವೇ ಮೊದಲ ಸ್ಥಾನದಲ್ಲಿದೆ. ನೆರೆಯ ರಾಜ್ಯಗಳಾದ ತೆಲಂಗಾಣ (10 ದಿನ), ಗೋವಾ (13), ತಮಿಳುನಾಡು (16), ಕೇರಳ (18), ಆಂಧ್ರಪ್ರದೇಶ (14) ಕ್ಕಿಂತ ಕರ್ನಾಟಕದಲ್ಲೇ ವೇಗವಾಗಿ ಸೋಂಕು ಹರಡುತ್ತಿದೆ.

**ಬೆಂಗಳೂರಿನಲ್ಲಿ 1 ಲಕ್ಷ ಪ್ರಕರಣ:** ಕಾರ್ಯಪಡೆಯ ಹಿರಿಯ ಅಧಿಕಾರಿಯೊಬ್ಬರ ಪ್ರಕಾರ, ಜು.5ರ ವೇಳೆಗೆ ಪ್ರತಿ 9 ದಿನಗಳಿಗೊಮ್ಮೆ ಸೋಂಕು ದ್ವಿಗುಣಗೊಳ್ಳುತ್ತಿದೆ. ಜು.7 ರಂದು ಪ್ರಕರಣ ಕಡಿಮೆಯಾಗಿದ್ದರಿಂದ ದ್ವಿಗುಣ ದರ 10 ದಿನಕ್ಕೆ ಏರಿಕೆಯಾಗಿದೆ. ಇದೇ ರೀತಿಯಾದರೆ ಮುಂದಿನ 20 ದಿನಗಳೊಳಗಾಗಿ ಸೋಂಕು 1 ಲಕ್ಷ ಗಡಿ ಮುಟ್ಟಲಿದೆ.

**ಗುರಿ ತಲುಪುತ್ತಿಲ್ಲ ಪರೀಕ್ಷೆ:** ರಾಜ್ಯದಲ್ಲಿ ಉದ್ದೇಶಿತ ಪ್ರಮಾಣದಲ್ಲಿ ಕೊರೋನಾ ಪರೀಕ್ಷೆ ನಡೆಯುತ್ತಿಲ್ಲ. ಸರ್ಕಾರವೇ ವಿಧಿಸಿಕೊಂಡಿರುವ ಗುರಿಯನ್ನೂ 23 ಜಿಲ್ಲೆಗಳಲ್ಲಿ ತಲುಪಲು ಸಾಧ್ಯವಾಗಿಲ್ಲ. ನಿತ್ಯ 4370 ಪರೀಕ್ಷೆಯ ಗುರಿ ನೀಡಿದ್ದರೆ ಶೇ.56.2 ರಷ್ಟು ಪರೀಕ್ಷೆ ಮಾತ್ರ ನಡೆಸಲಾಗುತ್ತಿದೆ.

**ಬೆಂಗಳೂರಲ್ಲೇ 50 ಸಾವಿರ ಸೋಂಕು?:** ಬೆಂಗಳೂರಿನಲ್ಲಿ 6 ದಿನದಲ್ಲೇ ದ್ವಿಗುಣವಾಗುತ್ತಿದೆ. ಜುಲೈ ಅಂತ್ಯದ ವೇಳೆಗೆ ಬೆಂಗಳೂರಿನಲ್ಲೇ 50 ಸಾವಿರಕ್ಕೂ ಹೆಚ್ಚು ಸೋಂಕು ಪತ್ತೆಯಾಗಲಿದೆ. ಕಳೆದ 7 ದಿನದಲ್ಲಿ ಬೆಂಗಳೂರಿನಲ್ಲಿ ಪರೀಕ್ಷೆ ನಡೆಸಿದ ಪ್ರತಿ 100 ಮಂದಿಯಲ್ಲಿ ಶೇ.21.4 ಮಂದಿಗೆ ಸೋಂಕು ದೃಢಪಟ್ಟಿದೆ. ಇದು ಆತಂಕ ಸೃಷ್ಟಿಸಿದ್ದು, ಪರೀಕ್ಷೆ ಹೆಚ್ಚಾದಷ್ಟೂ ಸೋಂಕು ಹೆಚ್ಚಾಗಲಿದೆ ಎಂದು ತಜ್ಞರು ತಿಳಿಸಿದ್ದಾರೆ.

# 16 ಸಾವಿರ ರಿಸಲ್ಟ್ ಬಾಕಿ

ರಾಜ್ಯದಲ್ಲಿ ನಿತ್ಯ ನಡೆಸುತ್ತಿರುವ ಸೋಂಕು ಪರೀಕ್ಷೆಯಲ್ಲಿ 16 ಸಾವಿರ ಫಲಿತಾಂಶ ಬರುವುದು ಬಾಕಿ ಇದೆ. ವಿವಿಧ ಪ್ರಯೋಗಾಲಯಗಳಲ್ಲಿ ಸಿಬ್ಬಂದಿ ಸೋಂಕು ಉಂಟಾಗಿದ್ದು ಸೇರಿದಂತೆ ವಿವಿಧ ಕಾರಣಗಳಿಂದ ಸೋಂಕು ಪರೀಕ್ಷೆ ಫಲಿತಾಂಶ ವಿಳಂಬವಾಗುತ್ತಿದೆ ಎಂದು ಪ್ರಯೋಗಾಲಯಗಳ ಉಸ್ತುವಾರಿ ಹಾಗೂ ಜಯದೇವ ಆಸ್ಪತ್ರೆ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಹೇಳುತ್ತಾರೆ.